SC No. 23/2024
PW-11

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

ಎಸ್. ಸಿ. 23/2024

| | | |
|---|---|---|
| ಸಾಕ್ಷಿದಾರರ ಹೆಸರು | ಇಳಿಂಗದಿರವನ್ @ ಯೇಸು | ಪ್ರಮಾಣ ವಚನ ಮಾಡಿದ ದಿನಾಂಕ: 18.02.2026 |
| ತಂದೆಯ/ಗಂಡನ ಹೆಸರು | ಸೆಲ್ವಮಣಿ | |
| ವಯಸ್ಸು | 33 ವರ್ಷ | |
| ವೃತ್ತಿ | ಟೆಕ್ನೀಶಿಯನ್ | ಪ್ರಾ.ಸಾಃ 11 |
| ವಾಸ ಸ್ಥಳ | ಹಳೆ ಕೆಸರೆ ಗ್ರಾಮ | ಚಾ.ಸಾಃ 6 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಹಳೆ ಕೆಸರೆ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ನಾನು ಕಳೆದ 2 ವರ್ಷಗಳಿಂದ ವಾಸವಾಗಿರುತ್ತೇನೆ. ನಾನು ಮೂಲತಃ ಚಾಮರಾಜನಗರ ಜಿಲ್ಲೆಯ ಹನ್ನೂರು ತಾಲ್ಲೂಕಿನ ಕೌದಳ್ಳಿಯ ಎಂ.ಜಿ ದೊಡ್ಡಿ ಗ್ರಾಮದವನಿರುತ್ತೇನೆ. ನಾನು ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಇರುವ SLN Diagnostic ನಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ಹೆಂಡತಿ ಯ ಹೆಸರು ಅನಿತಾ ಜ್ಯೋತಿ. ನನಗೆ ಮಂಜುಳಾ ರವರು ಗೊತ್ತು. ಅವರ ಮನೆ ನಾವು ಇರುವ ಓಣಿಯಲ್ಲಿಯೇ ಇರುತ್ತದೆ. ದೀಪು ನನಗೆ ಗೊತ್ತಿರುವುದಿಲ್ಲ. ನನ್ನ ಹೆಂಡತಿ ಅನಿತ ರವರಿಗೆ ಮಂಜುಳಾ ರವರು ಕರೆ ಮಾಡಿ ಮನೆಗೆ ಬರುವಂತೆ ಹೇಳಿ ಮನೆಯ ಬಳಿಗೆ ಹೋಗಿ ಬಾಗಿಲಿನ ಪಕ್ಕದಲ್ಲಿ ಇರುವ ಕಿಟಕಿಯಲ್ಲಿ ನೋಡಿದಾಗ ಮಂಜುಳಾ ರವರ ಮುಖವೆಲ್ಲಾ ರಕ್ತ ಗಾಯ ಆಗಿತ್ತು ತೆಗೆಯಲು ಪ್ರಯತ್ನಿಸಿದಾಗ ತೆಗೆಯಲು ಆಗಲಿಲ್ಲ ರೀಟಾ ರವರೊಂದಿಗೆ ಹೋಗಿ ಕೂಗಿಕೊಂಡಾಗ

ಮಂಜುಳಾ ರವರ ಬಾಗಿಲು ತೆಗೆದು ಕೆಳಗೆ ಬಿದ್ದು ಹೋದರು ನೀರು ಕುಡಿಸಿ ಕೇಳಿದಾಗ ದೀಪು ಗಂಟಲು ನೋವು ಇದೆ ನೀರು ಕಾಯಿಸಿಕೊಡಿ ಎಂದು ಕೇಳಿದ್ದ ನೀರು ಕಾಯಲು ಇಟ್ಟು ವಾಪಸ್ಸು ಬರುತ್ತಿದ್ದಾಗ ದೀಪು ಬಾಗಿಲ ಬೋಲ್ಟ್ ಹಾಕಿ ಚೊಂಬಿನಿಂದ ಮುಖಕ್ಕೆ ಹೊಡೆದಿದ್ದರ ಬಗ್ಗೆ ನನಗೆ ಹೇಳಿರಲಿಲ್ಲ ಮತ್ತು ದೀಪು ಮಂಜುಳಾ ರವರ ಬಾಯಿಗೆ ಟವಲ್ ಅನ್ನು ಹಾಕಿ ಹೊಡೆದು ಚಿನ್ನದ ಸರ ಮತ್ತು ಓಲೆಯನ್ನು ಕಿತ್ತುಕೊಂಡು ಹೋಗಿರುತ್ತಾನೆ ಎಂದು ಹೇಳಿರಲಿಲ್ಲ. ಆದರೆ ಮಂಜುಳಾರವನ್ನು ಪಕ್ಕದಲ್ಲಿ ಇದ್ದಂತಹ ಆಸ್ಪತ್ರೆಗೆ ನಾನು ಮತ್ತು ಕುಮಾರ್ ರವರು ಕರೆದುಕೊಂಡು ಹೋಗಿದ್ದೆವು ಆಸ್ಪತ್ರೆಗೆ ಹೋದ ಮೇಲೆ ಮಂಜುಳಾ ರವರು ದೀಪು ನನಗೆ ಹೊಡೆದು ಒಡವೆಗಳನ್ನು ಕಿತ್ತುಕೊಂಡು ಹೋಗಿದ್ದ ಎಂದು ಹೇಳಿದ್ದರು ಆದರೆ ನನ್ನ ಮನೆಯವರು ಹೇಳಿರಲಿಲ್ಲ. ಪೊಲೀಸರು ಈ ಬಗ್ಗೆ ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದರು.

***( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)***

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.**